**ಓ ಎಸ್ 89/2023 ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 10.06.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಕೆ ಎಸ್ ಎಂ ವಕೀಲರಿಂದಃ**

ನಮ್ಮ ತಾತನ ಹೆಸರು ಕರೀಗೌಡ. ನಮ್ಮ ತಾತನನ್ನು ತಿಮ್ಮರಾಯೀಗೌಡ ಎಂತಲೂ ಕರೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತನಿಗೆ ಇಬ್ಬರು ಹೆಂಡತಿಯರು ಎಂಬುದು ನನಗೆ ಗೊತ್ತಿಲ್ಲ. ನನ್ನ ತಾತನ ಮೊದಲನೇ ಹೆಂಡತಿ ಹೆಸರು ಸಣ್ಣನಿಂಗಮ್ಮ ಎಂಬುದು ನನಗೆ ಗೊತ್ತಿಲ್ಲ. ಸಣ್ಣನಿಂಗಮ್ಮರವರು ಮಕ್ಕಳು ಇಲ್ಲದೆ ತೀರಿಕೊಂಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ.

ನಮ್ಮ ತಾತನ 2 ನೇ ಹೆಂಡತಿ ಲಕ್ಷ್ಮಮ್ಮರವರಿಗೆ 6 ಜನ ಮಕ್ಕಳು. ಆ ಪೈಕಿ 4 ಗಂಡು, 2 ಹೆಣ್ಣು. ಅವರುಗಳೆಂದರೆ ಏಲಕ್ಕೇಗೌಡ, ತಿಮ್ಮೇಗೌಡ, ಪುಟ್ಟೇಗೌಡ, ನೀಲೇಗೌಡ, ಹೊನ್ನಮ್ಮ ಮತ್ತು ಪುಟ್ಟಮ್ಮ. ಈ 6 ಜನರ ಪೈಕಿ ನೀಲೇಗೌಡರನ್ನು ಹೊರತುಪಡಿಸಿ ಉಳಿದವರೆಲ್ಲರೂ ಮೃತರಾಗಿದ್ದಾರೆ. ನಾನು ಹಾಗೂ ಪ್ರತಿವಾದಿಗಳು ಪುಟ್ಟೇಗೌಡರ ಮಕ್ಕಳು ಎಂದರೆ ಸರಿ. ನಮ್ಮ ತಂದೆಯ ಸಹೋದರರಿಗೆ ಹೆಂಡತಿ ಮಕ್ಕಳು ಹಾಗೂ ಸಹೋದರಿಯರಿಗೆ ಗಂಡ ಮತ್ತು ಮಕ್ಕಳು ಇದ್ದಾರೆ ಎಂದರೆ ಸರಿ. ನಮ್ಮ ತಂದೆ ಪುಟ್ಟೇಗೌಡರು ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ನೌಕರರಾಗಿದ್ದರು ಎಂದರೆ ಸರಿ. ನಮ್ಮ ತಾಯಿಯನ್ನು ಮದುವೆ ಮಾಡಿಕೊಳ್ಳುವ ಮೊದಲೇ ನಮ್ಮ ತಂದೆ ಕೆಲಸದಲ್ಲಿ ಇದ್ದರು. ನಮ್ಮ ತಂದೆಯು ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಸಕ್ಕರೆ ಕಾರ್ಖಾನೆಯ ಕ್ವಾಟ್ರರ್ಸನಲ್ಲಿ ವಾಸ ಮಾಡುತ್ತಿದ್ದರು. ನಾನು ಹಾಗೂ ನನ್ನ ಒಡಹುಟ್ಟಿದವರು ಎಲ್ಲರೂ ಪಾಂಡವಪುರದ ವಿಶ್ವೇಶ್ವರಯ್ಯ ನಗರದಲ್ಲಿ ಜನಿಸಿದೆವು ಎಂದರೆ ಸರಿ. ನಾವೆಲ್ಲರೂ ಪಾಂಡವಪುರದ ವಿಶ್ವೇಶ್ವರಯ್ಯ ನಗರದಲ್ಲಿ ಜನಿಸಿರುವುದರಿಂದ ನನಗೆ ಹೊಸ ಸಾಯಪ್ಪನಹಳ್ಳಿಯಲ್ಲಿನ ವ್ಯವಹಾರಗಳು ಹೆಚ್ಚಾಗಿ ಗೊತ್ತಿಲ್ಲ ಎಂದರೆ ಸರಿ. ನಮ್ಮ ತಂದೆಯ ಹುಟ್ಟೂರು ಹೊಸ ಸಾಯಪ್ಪನಹಳ್ಳಿ

ಎಂದರೆ ಸರಿ. ನಮ್ಮ ತಾತನಿಗೆ ಸೇರಿದ ಆಸ್ತಿಗಳು ಈಗಲೂ ಸಹ ಹೊಸ ಸಾಯಪ್ಪನಹಳ್ಳಿ, ಡಿಂಕಾಶೆಟ್ಟಹಳ್ಳಿ ಹಾಗೂ ಕಬ್ಬಲಗೆರೆ ಗ್ರಾಮಗಳಲ್ಲಿ ಇವೆ ಎಂದರೆ ಸರಿ.

ದಾವಾ ಆಸ್ತಿಗಳೆಲ್ಲವನ್ನು ನಮ್ಮ ತಂದೆಯು ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾಗ ಸಂಪಾದಿಸಿ ಹಣದಿಂದ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಕೆಲವು ಸ್ವತ್ತುಗಳನ್ನು ನಮ್ಮ ತಾತನ ಆಸ್ತಿ ಮಾರಿ ಕ್ರಯಕ್ಕೆ ಪಡೆದಿದ್ದಾರೆ. ನಮ್ಮ ತಾತನ ಯಾವ ಊರಿನ ಆಸ್ತಿಯನ್ನು ಯಾವ ವರ್ಷದಲ್ಲಿ ನಮ್ಮ ತಂದೆಯು ಮಾರಾಟ ಮಾಡಿ ದಾವಾ ಷೆಡ್ಯೂಲ್ ಸ್ವತ್ತುಗಳ ಪೈಕಿ ಯಾವ ಆಸ್ತಿಯನ್ನು ಕ್ರಯಕ್ಕೆ ಪಡೆದರು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆಯು ನಮ್ಮ ತಾತನ ಯಾವ ಆಸ್ತಿಯನ್ನು ಮಾರಾಟ ಮಾಡಿದ್ದಾರೋ ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನಮ್ಮ ತಾತನ ಆಸ್ತಿಯನ್ನು ನಮ್ಮ ತಂದೆಯು ಮಾರಾಟ ಮಾಡಿದ ವಿಷಯ ನನಗೆ ಗೊತ್ತಾಗಿ ಸುಮಾರು 28-29 ವರ್ಷಗಳಾಗಿವೆ. ನಮ್ಮ ತಂದೆಯು ನಮ್ಮ ತಾತನ ಆಸ್ತಿಯನ್ನು ಮಾರಾಟ ಮಾಡಿ ಆಸ್ತಿ ಖರೀದಿ ಮಾಡಿದ್ದಾರೆ ಎಂದು ನನ್ನ ದಾವಾ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ.

ಹೊಸ ಸಾಯಪ್ಪನಹಳ್ಳಿ, ಡಿಂಕಾಶೆಟ್ಟಹಳ್ಳಿ ಹಾಗೂ ಕಬ್ಬಲಗೆರೆ ಗ್ರಾಮಗಳಲ್ಲಿ ಇರುವ ನಮ್ಮ ತಾತನ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಜಮೀನುಗಳ ಸರ್ವೆ ನಂಬರು ಹಾಗೂ ವಿಸ್ತೀರ್ಣ ನನಗೆ ನೆನಪಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಓ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**